# ಕಾರಂತರೊಂದಿಗೆ ಕಳೆದ ಕ್ಷಣ




**ಕನ್ನಡ ಸಾಹಿತ್ಯದ ಮೇರುಶಿಖರ ಕೋಟ ಶಿವರಾಮ ಕಾರಂತರನ್ನು ಸಮಾರಂಭವೊಂದಕ್ಕೆ ಆಹ್ವಾನಿಸಿ ಅವರೊಂದಿಗೆ ಕಳೆದ ಕೆಲಸಮಯ ಜೀವಮಾನದಲ್ಲಿ ಎಂದೂ ಮರೆಯುವಂಥದ್ದಲ್ಲ. ಕಾರಂತರೊಡನೆ ಒಡನಾಟ ಸವಿನೆನಪುಗಳಾಗಿ ಉಳಿದಿದ್ದು ಸದಾ ಮೆಲುಕು ಹಾಕುವಂಥದ್ದು.**

**■ ನಾಗಪತಿ ವಿ. ಭಟ್**
**ಶಿವಮೊಗ್ಗ**

ಆಗಷ್ಟೇ ಸರ್ಕಾರಿ ಕೆಲಸಕ್ಕೆ ಸೇರಿದ ದಿನಗಳವು. ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನಲ್ಲಿ ಇಂಜಿನಿಯರ್ ಆಗಿ ನೇಮಕಗೊಂಡಿದ್ದೆ. ಕೆಲಸದೊಡನೆ ಸಮಾಜದ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಉತ್ಸಾಹ. ಸ್ಥಳೀಯ ಲಯನ್ಸ್ ಸಂಸ್ಥೆಯೊಂದಿಗೆ ಸೇರಿ ಹಲವಾರು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದೆ.

ಹೊಸನಗರದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್‌ನ ಘಟಕವೊಂದನ್ನು ಪ್ರಾರಂಭಿಸಬೇಕೆಂದು ಹಿರಿಯರೆಲ್ಲರೂ ತೀರ್ಮಾನಿಸಿದರು. ಅವರಲ್ಲಿ ಅದೇ ಪಟ್ಟಣದಲ್ಲಿ ಖಾಸಗೀ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದ ಡಾ. ಶಿವುರವರ ಒತ್ತಾಸೆಯೂ ಇತ್ತು. ಉದ್ಘಾಟನೆಗೆ ಸೂಕ್ತ ವ್ಯಕ್ತಿಯನ್ನು ಹುಡುಕಲು ಪ್ರಾರಂಭಿಸಿದೆವು. ನಮ್ಮಲ್ಲೊಬ್ಬರು ಡಾ. ಶಿಮರಾಮ ಕಾರಂತರನ್ನು ಭೇಟಿ ಮಾಡಿ 1987 ರ ಏಪ್ರಿಲ್ 4 ರಂದು ಉದ್ಘಾಟನೆಯ ದಿನಾಂಕಕ್ಕೆ ಒಪ್ಪಿಸಿಯೇ ಬಿಟ್ಟರು. ಅದಾಗಲೇ ಕಾರಂತರ 'ಮೂಕಜ್ಜಿಯ ಕನಸುಗಳು' ಕಾದಂಬರಿ ಓದಿದ ನನಗೆ ದೇವರ ಕುರಿತು ಸ್ಪಷ್ಟ ಕಲ್ಪನೆ ಬಂದಿತ್ತು. ಕಾರಂತರನ್ನು ಕಣ್ತುಂಬಿಕೊಳ್ಳಲು ಮನ ಹಾತೊರೆಯುತ್ತಿತ್ತು.

ಉದ್ಘಾಟನೆಯ ದಿನ ಬಂದೇ ಬಿಟ್ಟಿತು. ಹೇಳಿದಂತೆ ಸಮಯಕ್ಕೆ ಸರಿಯಾಗಿ ಕಾರಂತರು ಆಗಮಿಸಿದ್ದೂ ಆಯಿತು. ನಿರೀಕ್ಷಿತ ಜನ ಸೇರದೆ ಸಭೆಯನ್ನು ಹೇಗೆ ಪ್ರಾರಂಭಿಸುವುದೆಂಬ ಚಿಂತೆಯಲ್ಲಿದ್ದೆ. ಸಂಘಟಕರನ್ನು ನೋಡಿ ಕಾರಂತರೇ ಸೇರಿದ್ದ ಜನರ ಮಧ್ಯೆಯೇ ಕುಳಿತು ಮಾತಿಗಾರಂಭಿಸಿದರು.

ಆಗಿನ್ನೂ ಕೈಗಾ ಅಣುಸ್ಥಾವರ ಪರ ವಿರೋಧ ಚರ್ಚೆಗಳು ಪ್ರಾರಂಭವಾಗಿದ್ದವು. ಕಾರಂತರು ಅಣುಸ್ಥಾವರಗಳ ದುರಂತಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು. ಅಣು ಸ್ಥಾವರಗಳನ್ನು ನಿರ್ಮಿಸಿದರೆ ಇನ್ನು ಲಕ್ಷಾಂತರ ವರ್ಷಗಳವರೆಗೂ ನೆಲದಲ್ಲಿ ಬಾಂಬ್ ಹುದುಗಿಸಿಟ್ಟಂತೆ. ಅರಣ್ಯನಾಶ, ಪರಿಸರ ನಾಶ ಮಾಡಿದಲ್ಲಿ ನಮ್ಮ ಮುಂದಿನ ಜನಾಂಗಗಳು ನಮಗೆ ಶಾಪ ಹಾಕುವುದು ಖಂಡಿತ ಎಂದೆಲ್ಲ ವಿವರಿಸಿದರು. ಅದುವರೆಗೂ ಅಣುಸ್ಥಾವರಗಳ ಪರವಾಗಿದ್ದ ನಾವೆಲ್ಲ ವಿರೋಧದ ಕಡೆಗೆ ಬಂದೆವು.

ನಂತರ ವಿಚಾರ ರಾಜಕೀಯದತ್ತ ಹೊರಳಿತು. ಎಲ್ಲಿಯವರೆಗೆ ಅಜ್ಞಾನ ಹಾಗೂ ಬಡತನವಿರುತ್ತದೆಯೋ ಅಲ್ಲಿಯವರೆಗೂ ಪ್ರಜಾಪ್ರಭುತ್ವ ಎಂದರೆ ಹೀಗೆ. ನಮ್ಮ ರಾಜಕಾರಣಿಗಳಿಗೂ ಇದೇ ಬೇಕಾಗಿದೆ. ಇದರ ಬದಲಾವಣೆಗೆ ಯುವಕರು ಮುಂದೆ ಬರಬೇಕೆಂದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಹೊಸನಗರ ಘಟಕ ಉದ್ಘಾಟನೆ ಮಾಡಿದ ಕಾರಂತರು ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಳ್ಳಬೇಕಾದ ಅಗತ್ಯವನ್ನು ತಿಳಿಸಿ, ಹಿರಿಯರಿಗೆ ಅವನ್ನು ಜೀವನದಲ್ಲಿ ಅಳವಡಿಸಿಕೊಂಡು ಕಿರಿಯರಿಗೆ ಮಾದರಿಯಾಗುವಂತೆ ಹಿತೋಕ್ತಿ ನುಡಿದರು. ಅವರ ಭಾಷಣದ ಪ್ರತಿಯೊಂದು ತುಣುಕು ಕೂಡ ಅತ್ಯಂತ ತೂಕಬದ್ಧವಾಗಿದ್ದು, ಆಯಾ ಕಾಲಮಾನಕ್ಕೆ ಸೂಕ್ತವಾದಂಥವು. ಇಂಥ ಹಿರಿಯ ಸಾಹಿತಿಯ ಮಾತು ಜನರಿಗೆ ನಿಜಕ್ಕೂ ಪ್ರೇರಣೆ ನೀಡುವಂಥವು.

ಡಾ. ಶಿವುರವರ ಮನೆಯಲ್ಲಿ ಆತಿಥ್ಯ ಸ್ವೀಕರಿಸಿದ ಕಾರಂತರು, ತಾವು ಉದ್ಘಾಟಿಸಿದ ವಿಜ್ಞಾನ ಪರಿಷತ್ ಘಟಕದ ಮುಂದಿನ ಬೆಳವಣಿಗೆಯನ್ನು ತಮಗೆ ಪತ್ರ ಬರೆದು ತಿಳಿಸಬೇಕಾಗಿ ಕೋರಿ ಹೊರಟೇ ಬಿಟ್ಟರು. ಅವರ ಸಮಯ ಪರಿಪಾಲನೆ ಶಿಸ್ತಿನ ನಡಿಗೆ ನಮ್ಮನ್ನೆಲ್ಲಾ ಮೂಕವಿಸ್ಮಿತಗೊಳಿಸಿತು. ಇಂದಿಗೂ ಆ ದಿನಗಳನ್ನು ನೆನೆದಾಗ ಮೈರೋಮಾಂಚನವಾಗುತ್ತದೆ.

ಶಿವರಾಮ ಕಾರಂತರ ದಿಟ್ಟ ನಡೆ, ಸಮಯ ಪ್ರಜ್ಞೆ, ಕಟ್ಟುನಿಟ್ಟಿನ ವ್ಯಕ್ತಿತ್ವ ಎಲ್ಲರಿಗೂ ಮಾದರಿ. ಅವರೊಂದಿಗಿನ ಒಡನಾಟ ಎಷ್ಟು ವರುಷಗಳು ಕಳೆದರೂ ನೆನಪಿನಂಗಳದಿಂದ ಮಾಸುವುದೇ ಇಲ್ಲ. ಅವರಂತಹ ಮೇರು ಶಿಖರವನ್ನು ಆಹ್ವಾನಿಸಿ ಕೊಂಚ ಸಮಯ ಕಳೆದದ್ದು ನಮ್ಮ ಅದೃಷ್ಟವೇ ಸರಿ. ■